ವಿಷಯ :(ಈ) ಕ್ಯಾಸನೂರು ಕಾಡಿನ ಖಾಯಿಲೆ ಅಥವಾ ಮಂಗನ ಖಾಯಿಲೆಗೆ ಔಷಧಿ ಒದಗಿಸುವ ಬಗ್ಗೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಕ್ಯಾಸನೂರು ಕಾಡಿನ ಖಾಯಿಲೆ ಅಥವಾ ಮಂಗನ ಖಾಯಿಲೆಯಿಂದ 6 ಜನ ಈಗಾಗಲೇ ತೀರಿಕೊಂಡಿದ್ದಾರೆ. ಅಲ್ಲದೆ ಸುಮಾರು 128ಕ್ಕೂ ಹೆಚ್ಚು ಜನ ಈ ಖಾಯಿಲೆಯ ವ್ಯಾಧಿಯಿಂದ ನರಳುತ್ತಿದ್ದಾರೆ ಎಂದು Taluk Medical Officer ನನಗೆ ವರದಿ ಕೊಟ್ಟಿದ್ದಾರೆ. ಆದರೆ ದುರ್ದೈವದಿಂದ ನಮ್ಮಲ್ಲಿ ಆರು ಜನ ಸತ್ತು ಹೋಗಿದ್ದರೂ ಕೂಡ, ಮಾನ್ಯ ಆರೋಗ್ಯ ಖಾತೆಯ ಸಚಿವರಾಗಲಿ, ಸರ್ಕಾರದ ಯಾವುದೇ ಸಚಿವರಾಗಲಿ ಅಲ್ಲಿಗೆ ಭೇಟಿ ಕೊಟ್ಟಿಲ್ಲ. ಮೃತಪಟ್ಟಿರತಕ್ಕಂಥ ಆರೂ ಜನ ತೋಟ ಕಾರ್ಮಿಕರಾಗಿದ್ದಾರೆ. ಅವರಿಗೆ ಗಂಜಿ ಕೇಂದ್ರದ ಪ್ರತ್ಯೇಕ ವ್ಯವಸ್ಥೆ ಮಾಡಿಲ್ಲ. ಅವರಿಗೆ ಪೂರ್ವಭಾವಿ ತಿಳುವಳಿಕೆ ಕೊಟ್ಟು ಮಂಗನಿಂದ ಬರತಕ್ಕಂಥ ಖಾಯಿಲೆ ಉಣ್ಣೆ ಮೈಗೆ ಹತ್ತದಂತೆ ಎಣ್ಣೆಯನ್ನು ಕೊಡಬೇಕಾಗಿತ್ತು. ಆ ಎಣ್ಣೆಯನ್ನು ಕೊಡಬೇಕಾದಂತಹ ಕೆಲಸವೂ ಸಹ ಆಗಿಲ್ಲ. ಗಂಭೀರವಾಗಿರುವಂತಹ ವಿಚಾರವೆಂದರೆ, ಏಡ್ಸ್ ಖಾಯಿಲೆಗೆ ಯಾವ ರೀತಿಯಾಗಿ ಒಮ್ಮೆ ಆ ಖಾಯಿಲೆ ಬಂತೆಂದರೆ, ಅದಕ್ಕೆ ಔಷಧಿ ಇಲ್ಲವೋ, ಈ ಮಂಗನ ಖಾಯಿಲೆಯಿಂದ ರೋಗಗ್ರಸ್ತನಾದಂತಹ ವ್ಯಕ್ತಿಗೆ ಯಾವುದೇ ಔಷಧಿ ಇಲ್ಲ. ಹಾಗಾಗಿ preventive measure ಆಗಿ ಏನೊಂದು ಯೋಚನೆಯನ್ನು ಮಾಡಬೇಕಾಗಿದೆಯೋ, ಆ ಯೋಚನೆಯನ್ನು ಸರ್ಕಾರ ಮಾಡುತ್ತಿಲ್ಲ. ಆ ಪ್ರದೇಶದಲ್ಲಿ 12 ಸಾವಿರಕ್ಕೂ ಹೆಚ್ಚು ಜನ ವಾಸಿಸುತ್ತಿದ್ದಾರೆ. ಇದು ಸಾಂಕ್ರಾಮಿಕವಾಗಿ ವ್ಯಾಪಕವಾಗಿ ಹರಡುವಂತಹ ಸಾಧ್ಯತೆ ಇರುವುದರಿಂದ, ಸರ್ಕಾರ ತನ್ನ ಅಸ್ತಿತ್ವದ ಪ್ರಕಟೀಕರಣ ಮಾಡಬೇಕು. ಆರೋಗ್ಯ ಖಾತೆಯ ಸಚಿವರು ತಕ್ಷಣ ಅಲ್ಲಿಗೆ ಭೇಟಿ ಕೊಡಬೇಕು. ಪೂರ್ವಭಾವಿಯಾಗಿ ಆ ರೋಗವನ್ನು ನಿಯಂತ್ರಿಸುವುದಕ್ಕೆ ಬೇಕಾದಂತಹ ಸಿದ್ಧತೆಯನ್ನು ಮತ್ತು ಕ್ರಮಗಳನ್ನು ಕೈಗೊಳ್ಳಬೇಕು. ಈ ಬಗ್ಗೆ ಸರ್ಕಾರಕ್ಕೆ ತಾವು ಒತ್ತಾಯವನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ) : ಮಾನ್ಯ ಸಭಾಧ್ಯಕ್ಷರೇ, ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ನಾನೂ ಕೂಡ ಹೇಳುವುದಿದೆ. ಕೊಪ್ಪದ ಎನ್.ಆರ್.ಪುರದಲ್ಲಿ ಮೂಲವಾಗಿ ಮಂಗನ ಖಾಯಿಲೆ ಇದೆ. ಈಗ ಮಂಗನ ಖಾಯಿಲೆ ಇರುವಂತಹ ಪ್ರದೇಶದಲ್ಲಿ 5 ಜನ ಡಾಕ್ಟರ್ ಇರಬೇಕಾದಂತಹ ತಾಲ್ಲೂಕು ಆಸ್ಪತ್ರೆಯಲ್ಲಿ Dentist ಬಿಟ್ಟರೆ, Physician ಆಗಲಿ, Surgeon ಆಗಲಿ, ಯಾವುದೇ ಡಾಕ್ಟರ್‌ಗಳು ಇಲ್ಲದೆ, ಐದೂ ಡಾಕ್ಟರ್‌ಗಳ ಹುದ್ದೆಗಳು ಖಾಲಿ ಇರುವಂತಹ ವ್ಯವಸ್ಥೆ ಆಗಿದೆ. ಸರ್ಕಾರ ಡಾಕ್ಟರ್‌ಗಳನ್ನು ಇಲ್ಲಿಗೆ ನೇಮಿಸುವ ವ್ಯವಸ್ಥೆ ಮಾಡಬೇಕು. ಬಾಳೆಹೊನ್ನೂರು ಆಸ್ಪತ್ರೆಯಲ್ಲಿಯೂ ಸಹ ಡಾಕ್ಟರ್ ಇಲ್ಲ. ಅಲ್ಲಿಗೂ ಕೂಡ ಡಾಕ್ಟರರನ್ನು ನೇಮಿಸಬೇಕು. ಕಟ್ಟಿದಮನೆಖಾಲಿ ಇದೆ. ಎಲ್ಲವೂ ಮಂಗನ ಖಾಯಿಲೆ ಬರುವಂತಹ ಪ್ರದೇಶಗಳಲ್ಲಿರುವ ಆಸ್ಪತ್ರೆಗಳಾಗಿರುವುದರಿಂದ, ದಯಮಾಡಿ ಸರ್ಕಾರ ಅಲ್ಲಿರುವ ವೈದ್ಯರ ಹುದ್ದೆಗಳನ್ನು ತುಂಬುವ ಕಡೆಗೆ ಆದ್ಯತೆ ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ : (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ ಸನ್ಮಾನ್ಯ ಶಾಸಕರಾದ ರವಿಯವರು ಮತ್ತು ಜೀವರಾಜ್‌ರವರು ಆರೋಗ್ಯ ಸಚಿವರಿಗೆ ಸಂಬಂಧಪಟ್ಟಿರತಕ್ಕಂಥ ಇಲಾಖೆಯ ಕೆಲವು ಸಮಸ್ಯೆಗಳನ್ನು ಪ್ರಸ್ತಾಪಿಸಿದ್ದಾರೆ. ಮಂಗನ ಖಾಯಿಲೆ

ಉಲ್ಬಣಗೊಂಡಿರತಕ್ಕಂಥದ್ದರ ಬಗ್ಗೆ ಅವರು ತಮ್ಮ ಆತಂಕವನ್ನು ವ್ಯಕ್ತ ಮಾಡಿದ್ದಾರೆ. ತಾವು ಕೊಟ್ಟಿರತಕ್ಕಂಥ ಮಾಹಿತಿ ನಿಜ. ಇದು ಈಗಾಗಲೇ ಇಲಾಖೆಯ ಮತ್ತು ಸರ್ಕಾರದ ಗಮನಕ್ಕೆ ಬಂದಿದೆ. ಆಗಲೇ ಸನ್ಮಾನ್ಯ ಆರೋಗ್ಯ ಸಚಿವರು ನನ್ನ ಜೊತೆಗೆ ಮಾತನಾಡುತ್ತಿದ್ದರು. ಮಾನ್ಯ ಅಧ್ಯಕ್ಷರ ಪರವಾನಿಗೆ ಪಡೆದುಕೊಂಡು ಅವರು ಸದನದಿಂದ ನಿರ್ಗಮಿಸಿದ್ದಾರೆ. 27ನೇ ತಾರೀಖಿಗೆ ಪೂರ್ತಿಯಾಗಿರತಕ್ಕಂಥ ಉತ್ತರವನ್ನು ಮತ್ತು ಈ ದಿಶೆಯಲ್ಲಿ ಸರ್ಕಾರ ತೆಗೆದುಕೊಂಡಿರತಕ್ಕಂಥ ಕ್ರಮಗಳ ಬಗೆಗಿನ ವಿವರಗಳನ್ನು ನಾವು ನಿಮಗೆ ಒದಗಿಸುತ್ತೇವೆ.

ಶ್ರೀ ಡಿ.ಎನ್. ಜೀವರಾಜ್ : ವೈದ್ಯರ ಹುದ್ದೆ ತುಂಬುವ ಬಗ್ಗೆ ಮಾನ್ಯ ಸಚಿವರು ಏನನ್ನೂ ಹೇಳಲೇ ಇಲ್ಲ.

ಶ್ರೀ ಸಿ.ಟಿ. ರವಿ : ಉತ್ತರದ ಅಪೇಕ್ಷೆಗಿಂತ ಮುಂಚೆ .....

ಅಧ್ಯಕ್ಷರು : ಸಂಬಂಧಪಟ್ಟ ಸಚಿವರು ಸದನದಲ್ಲಿಲ್ಲ. ಅವರ ಗಮನಕ್ಕೆ ತಾವು ಪ್ರಸ್ತಾಪಿಸಿದ ವಿಷಯವನ್ನು ತರುವುದಾಗಿ ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೇ, ಸರ್ಕಾರ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿರುವುದು ಏಕೆಂದರೆ, ಈ ರೋಗ ಬಂದಿದೆಯೋ ಇಲ್ಲವೋ ಎನ್ನುವುದನ್ನು ಪತ್ತೆ ಹಚ್ಚುವುದಕ್ಕೆ ಬೇಕಾಗಿರುವಂತಹ ಬಿಳಿ ಇಲಿ ಶಿವಮೊಗ್ಗದಲ್ಲಿ ಸಿಗುತ್ತಿಲ್ಲ ಎಂದು ವರದಿ ಕೊಟ್ಟಿದ್ದಾರೆ. ಬಿಳಿ ಇಲಿಯನ್ನು import ಮಾಡಿಕೊಳ್ಳುವುದಕ್ಕೆ ಆದೇಶ ಕೊಡಬೇಕು.

ಅಧ್ಯಕ್ಷರು : ತಾವು ದಯಮಾಡಿ ಇದರ ಬಗ್ಗೆ ಮಾನ್ಯ ಆರೋಗ್ಯ ಸಚಿವರ ಹತ್ತಿರ ಮಾತನಾಡಿ. ಈಗ ಅವರು ಸದನದಲ್ಲಿಲ್ಲ.

ಶ್ರೀ ಸಿ.ಟಿ. ರವಿ : ಸರ್ಕಾರ ಈ ಕಡೆಗೆ ತಕ್ಷಣವೇ ಗಮನ ಹರಿಸಬೇಕು. ವಿಳಂಬವಾದರೆ, ಅಷ್ಟೊತ್ತಿಗೆ ಅಲ್ಲಿ ಇನ್ನೊಂದು ಇಪ್ಪತ್ತೈದು ಜನ ಸತ್ತು ಹೋಗುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಆ ಮಂಗನ ಖಾಯಿಲೆಗೆ ಬೇಕಾದಂತಹ ಔಷಧಿಗಳು ಸಿಗುತ್ತಿಲ್ಲ. ತಕ್ಷಣ ಅದಕ್ಕೆ ವ್ಯವಸ್ಥೆ ಮಾಡಬೇಕು. ಈಗಾಗಲೇ 6 ಜನ ಅಲ್ಲಿ ಸತ್ತಿದ್ದಾರೆ. ಔಷಧಿಗಳು ಇಲ್ಲದೆ ಇನ್ನಷ್ಟು ಜನ ಅಲ್ಲಿ ಸಾಯುವಂತಹ ಸ್ಥಿತಿ ಉಂಟಾಗಬಾರದು. ತಕ್ಷಣ ಅಲ್ಲಿಗೆ ಧಾವಿಸಿ ಹೋಗಬೇಕು. ತಾವು ನಾಳಿದ್ದು ರಿಪ್ಲೈ ಕೊಡಿ ಪರವಾಗಿಲ್ಲ. ಆದರೆ immediate relief ಅವರಿಗೆ ಸಿಗುವಂತೆ ಅಲ್ಲಿಗೆ ಔಷಧಿಗಳನ್ನು ಒದಗಿಸಿಕೊಡುವ ವ್ಯವಸ್ಥೆ ಮಾಡಿ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥ ಮಾಡಿಕೊಂಡಿದ್ದೇನೆ. ಅಲ್ಲಿ ಔಷಧಿಗಳು ಸಿಗುತ್ತಿಲ್ಲವೆಂದು ತಾವು ಪ್ರಸ್ತಾಪ ಮಾಡುತ್ತಿದ್ದೀರಿ. ಅಲ್ಲಿ ಔಷಧಿಗಳು ಸಿಗುವಂತೆ ಮಾಡಲು ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಮಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಅಲ್ಲಿ ಸರ್ಕಾರ ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದೆ ಅನ್ನುವುದರ ಬಗ್ಗೆ ವಿವರಗಳನ್ನೂ ಸಹಿತ ತಮಗೆ 27ನೇ ತಾರೀಖಿಗೆ ಒದಗಿಸುತ್ತೇವೆ. ತಾವು ಆರೋಗ್ಯ ಸಚಿವರು ಸ್ಥಳಕ್ಕೆ ಭೇಟಿ ಕೊಡಬೇಕೆಂಬುದರ ಬಗ್ಗೆ ಕೂಡ ಒತ್ತಾಯ ಮಾಡಿದ್ದೀರಿ. ಅದರ ಬಗ್ಗೆಯೂ ಸಹ ನಾನು ಮಾನ್ಯ ಆರೋಗ್ಯ ಸಚಿವರಿಗೆ ತಿಳಿಸುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಪ್ರಭಾಕರ ಬಂಗೇರಾರವರು ತಮ್ಮ ವಿಷಯ ಪ್ರಸ್ತಾಪಿಸಿ.

ಶ್ರೀ ಸಿ.ಟಿ. ರವಿ : ..... ಕ್ಷೇತ್ರದಿಂದ ಬಂದಿರತಕ್ಕಂಥ ಕಾರ್ಮಿಕರು ಇವರಾಗಿದ್ದಾರೆ. ಅಲ್ಲೂ ಕೂಡ ರೋಗ ಹರಡಿದೆ. ದಾವಣಗೆರೆ ಆಸ್ಪತ್ರೆಯಲ್ಲಿ ಇಬ್ಬರು ತೀರಿಕೊಂಡಿದ್ದಾರೆ. ...

ಅಧ್ಯಕ್ಷರು : ರವಿಯವರೇ, ದಯಮಾಡಿ ಕುಳಿತುಕೊಳ್ಳಿ. ಎಷ್ಟು ಸಾರಿ ಕೇಳುತ್ತೀರಿ? ಈಗ ಪ್ರಭಾಕರ ಬಂಗೇರಾರವರು ತಮ್ಮ ವಿಷಯ ಪ್ರಸ್ತಾಪಿಸಿ.

ಶ್ರೀ ಸಿ.ಟಿ. ರವಿ : ನಾನು ಮಾತಿಗೋಸ್ಕರ ಮಾತನಾಡುತ್ತಿಲ್ಲ.

ಅಧ್ಯಕ್ಷರು : ಆಯಿತು, ದಯಮಾಡಿ ಕುಳಿತುಕೊಳ್ಳಿ. ಮತಿಗೋಸ್ಕರವೇ ನೀವು ಮಾತನಾಡುತ್ತಿರುವುದು. ಎಷ್ಟು ಸಾರಿ ನೀವು ಮಾತನಾಡುತ್ತೀರಿ?

8. ವಿಷಯ (ಉ): ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರದಲ್ಲಿ ಸಹಕಾರಿ ಸಾಲದ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ

ಶ್ರೀ ಕೆ. ಪ್ರಭಾಕರ ಬಂಗೇರಾ (ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೇ, ನಮ್ಮ ಕ್ಷೇತ್ರದಲ್ಲಿ ತೋಟ ನಷ್ಟವಾಗಿ ಗೋಪಾಲಕೃಷ್ಣ ಭಟ್ ಎಂಬುವವರು ತುಂಬಾ ನಷ್ಟ ಅನುಭವಿಸುತ್ತಿದ್ದು ಅವರ ಕುಟುಂಬ ಸಹಕಾರಿ ಸಾಲವನ್ನು ಕಟ್ಟಲಿಕ್ಕೆ ಸಾಧ್ಯವಾಗದೇ ಇರುವಂತಹ ಸಂಗತಿಯನ್ನು ನಾನು ಈ ಸದನದ ಮೂಲಕ ಮಾನ್ಯ ಸಹಕಾರ ಮಂತ್ರಿಗಳಿಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ನಿವೇದನೆ ಮಾಡಿಕೊಳ್ಳುತ್ತಿದ್ದೇನೆ. ಅವರು ತುಂಬಾ ಕಷ್ಟದಲ್ಲಿದ್ದಾರೆ. ತೋಟ ನೀರಿಲ್ಲದೆ ಸುಟ್ಟು ಹೋಗಿರುವಂತಹ ಈ ಸಂದರ್ಭದಲ್ಲಿ ಸುಮಾರು 50 ಸಾವಿರದಷ್ಟು ಬಡ್ಡಿಯನ್ನು ಅವರು ಕಟ್ಟಿದ್ದಾರೆ. ಅವರಿಗೆ ಈಗ ಅದನ್ನು ನಿರ್ವಹಣೆ ಮಾಡಲಿಕ್ಕೆ ಸಾಧ್ಯವಾಗದಿರುವಂತಹ ಈ ಒಂದು ಸಂದರ್ಭದಲ್ಲಿ ಅವರಿಗೆ ಬಡ್ಡಿರಹಿತವಾದಂತಹ ಸಾಲವನ್ನು ಸರ್ಕಾರ ಕೊಡಬೇಕು. ಅದರ ಜೊತೆಗೆ ಪರಿಹಾರವಾಗಿ ಅವರಿಗೆ ಸುಮಾರು 1 ಲಕ್ಷ ರೂ.ಗಳನ್ನು ಅವರಿಗೆ ಕೊಡದಿದ್ದರೆ, ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ, ನನ್ನಿಂದ ಬದುಕಲಿಕ್ಕೆ ಸಾಧ್ಯವಿಲ್ಲ ಎಂಬ ವಿಚಾರವನ್ನು ಅವರು ತಿಳಿಸಿರುತ್ತಾರೆ. ಸಂಬಂಧಪಟ್ಟ ಸರ್ಕಾರಕ್ಕೂ ಕೂಡ ನಾನು ಈ ಬಗ್ಗೆ ಮನವಿಯನ್ನು ಮಾಡಿದ್ದೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಮನವಿಯನ್ನು ಮಾಡಿದಾಗ, ಸಹಕಾರಿ ಸಂಘದ ಕಾಯಿದೆ ಅನ್ವಯ ಅದಕ್ಕೆ ಕೊಡಲಿಕ್ಕೆ ಬರುವುದಿಲ್ಲ ಎಂಬ ವಿಚಾರವನ್ನು ತಿಳಿಸಿದ್ದಾರೆ. ಮಾನವೀಯ ದೃಷ್ಟಿಯಿಂದ ನಾನು ಈ ಸದನದ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಹಾಗೂ ಸಹಕಾರ ಮಂತ್ರಿಗಳಲ್ಲಿ ಅವರು ಕಟ್ಟಿರುವಂತಹ ಬಡ್ಡಿಯನ್ನು ಮನ್ನಾ ಮಾಡಬೇಕು. ಅದರೊಟ್ಟಿಗೆ ಅವರಿಗೆ ಸಾಧಾರಣ 1 ಲಕ್ಷದವರೆಗೆ ಬಡ್ಡಿರಹಿತವಾದಂತಹ ಸಾಲವನ್ನು ಕೊಟ್ಟು, ಅವರು ಜೀವನ ನಿರ್ವಹಣೆ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

ಅಧ್ಯಕ್ಷರು : ಸಹಕಾರ ಸಚಿವರು ಇಲ್ಲ. ಮಾನ್ಯ ಸಂಸದೀಯ ಸಚಿವರು ಈ ಬಗ್ಗೆ ಉತ್ತರ ಕೊಡಿ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿದಂತಹ ವಿಷಯಕ್ಕೆ ಸಂಬಂಧಪಟ್ಟಂತೆ ಸನ್ಮಾನ್ಯ ಅರ್ಥ ಸಚಿವರು ಹಾಗೂ ಉಪ ಮುಖ್ಯಮಂತ್ರಿಗಳು ಸಮಗ್ರವಾದ ರೀತಿಯಲ್ಲಿ ಉತ್ತರ